
8chapter

# ಅಧ್ಯಾಯ – ಎಂಟು

# ಸಮಾರೋಪ

ಇಪ್ಪತ್ತೊಂದನೆಯ ಶತಮಾನ ಭಾರತೀಯರ ಬದುಕಿನಲ್ಲಿ ಹಳೆಯದನ್ನು ಕೆಡವಿ ಹೊಸದನ್ನು ಕಟ್ಟುವ ನವನಿರ್ಮಾಣದ ಸಂದರ್ಭವಾದಂತಹ ಈ ಪರಿವರ್ತನೆಯ ಪರ್ವಕಾಲದಲ್ಲಿ ಹುಟ್ಟಿ, ಇಡೀ ಭಾರತದಲ್ಲಿಯೇ ತನ್ನ ವೈವಿಧ್ಯಮಯ ನವೀನ ಯೋಜನೆಗಳ ಮೂಲಕ ಹೊರಹೊಮ್ಮಿ ಬೆಳೆದ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ ಸೊಸೈಟಿ' ಪ್ರಾಚೀನ ಕರ್ನಾಟಕದ ಪ್ರತಿಷ್ಠಿತ ಧರ್ಮಗಳಲ್ಲಿ ಒಂದಾದ ಲಿಂಗಾಯತ ಧರ್ಮ ಹುಟ್ಟಿದ್ದು ಕರ್ನಾಟಕದಲ್ಲಿ ಹಾಗೆಯೇ ಬೆಳೆದದ್ದು ಸಹ ಕರ್ನಾಟಕದಲ್ಲಿ. ಹೀಗಾಗಿ ಕರ್ನಾಟಕದ ಆ ತುದಿಯಿಂದ ಈ ತುದಿಯವರೆಗೆ ಹಬ್ಬಿರುವ ಲಿಂಗಾಯತ ಸಮಾಜ ಈ ನಾಡು-ನುಡಿ-ಸಂಸ್ಕೃತಿಗಳನ್ನು ಅಂಗೈ ಲಿಂಗದಂತೆ ಆರಾಧಿಸುತ್ತ ಬಂದಿದೆ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಇದರ ಸಿದ್ಧಾಂತಕ್ಕೆ ಆಕರ್ಷಿತರಾಗಿ ಒಳಗೆ ಬಂದ, ಎಲ್ಲ ವರ್ಣ-ಎಲ್ಲ ವರ್ಗಗಳಿಂದಾಗಿ ಇದು ಸಂಕ್ಷಿಪ್ತ ಕರ್ನಾಟಕವೆನಿಸದೆ, ಹಲವಾರು ಧರ್ಮಪದ್ಧತಿಗಳಿಗೆ ಮಾದರಿಯಾಗಿದೆ. ಇಂಥ ಸಂರಚನೆಯುಳ್ಳ ಈ ಸಮಾಜದ ಕೇಂದ್ರ ಸಿದ್ಧಾಂತ 'ದಾಸೋಹ'. ದಾಸೋಹವೆಂದರೆ 'ಹಂಚುವುದು' ಎಂಬ ಅರ್ಥದ ಹಿನ್ನಲೆಯಲ್ಲಿ ತೊಡಗಿಕೊಂಡ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಲೇಬೇಕು.

ಭಾರತೀಯ ತತ್ವಶಾಸ್ತ್ರ 'ವ್ಯಕ್ತಿಶುದ್ಧಿ' ಹಂತವನ್ನು ದಾಟಿ, ಬುದ್ದನ ಕಾಲಕ್ಕೆ 'ಸಮಾಜಶುದ್ಧಿ' ಹಂತವನ್ನು ತಲುಪಿದಾಗ ಬಸವಣ್ಣನವರು ಇದನ್ನು 'ಸಮಾಜ ಸಮೃದ್ಧಿ' ಹಂತಕ್ಕೆ ವಿಸ್ತರಿಸಿದರು. ಈ ಸಮಾಜ ಸಮೃದ್ಧಿ ತತ್ವದ ಅಂಗವಾಗಿ ಕಾಯಕ-ದಾಸೋಹ ಪರಿಕಲ್ಪನೆಗಳು ಕಣ್ಣು ತೆರೆದವು. ಅಂದರೆ ವ್ಯಕ್ತಿ ಶುದ್ಧಿಯ 'ಸೋಹಂ' ಸಿದ್ಧಾಂತವನ್ನು ಬಸವಣ್ಣನವರು 'ದಾಸೋಹಂ' ಸಿದ್ಧಾಂತದವರೆಗೆ ಬೆಳೆಸಿದರು. 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂದು ಸಾರಿದರು. ಅಲ್ಲಿಂದ ಇಲ್ಲಿಯವರೆಗೆ ಬೇರೆ ಬೇರೆ ರೂಪಗಳಲ್ಲಿ ಪ್ರಕಟಗೊಳ್ಳುತ್ತ ಬಂದ ಈ ದಾಸೋಹ ಸಿದ್ಧಾಂತ ೨೦ನೆಯ ಶತಮಾನದಲ್ಲಿ ಶಿಕ್ಷಣ ರೂಪದಿಂದ ವ್ಯಕ್ತವಾಯಿತು. ಉತ್ತರ ಕರ್ನಾಟಕದಲ್ಲಿ ಈ 'ಶಿಕ್ಷಣ ದಾಸೋಹ'ದ ಪ್ರಥಮ ಸಂಸ್ಥೆಯಾಗಿದೆ. ಬೆಳಗಾವಿಯ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ' ಈ ಸಂಸ್ಥೆಯ ಹೆಸರಿನಲ್ಲಿರುವ 'ಕರ್ನಾಟಕ' ಮತ್ತು 'ಲಿಂಗಾಯತ' ಪದಗಳು ಏಕಕಾಲಕ್ಕೆ ಕರ್ನಾಟಕ ರಾಜ್ಯ ಮತ್ತು ಲಿಂಗಾಯತ ಸಮಾಜಗಳಿಗೆ ಶಿಕ್ಷಣ ಸಂಸ್ಕಾರ ಕೊಡುವ ಉದ್ದೇಶವನ್ನು ಧ್ವನಿಸುತ್ತವೆ.

ಪ್ರಾಚೀನ ಕಾಲದಲ್ಲಿ ಶಿಕ್ಷಣವೆಂದರೆ ಧರ್ಮತತ್ವಗಳ ಅಭ್ಯಾಸವಾಗಿದ್ದು, ಅದು ಆಯಾ ಧರ್ಮೀಯರಿಗೆ ಸೀಮಿತವಾಗಿದ್ದಿತು. ಹೀಗೆ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಶಿಕ್ಷಣ ಕ್ಷೇತ್ರವನ್ನು ಈ ನಾಡಿನಲ್ಲಿ ಮೊಟ್ಟ ಮೊದಲು ಸಾರ್ವಜನಿಕಗೊಳಿಸಿದವರು ೧೨ನೇ ಶತಮಾನದ ಶರಣರು. ಇವರು ಅಸ್ಪೃಶ್ಯರ ಮನೆಗೂ ಅಕ್ಷರ ಶಿಕ್ಷಣ ವಿಸ್ತರಿಸಿದ ಫಲವಾಗಿ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಹೊಲೆಯರ ಉರಿಲಿಂಗ ಪೆದ್ದಿ, ಕೊರವರ ನೂಲಿಯ ಚಂದಯ್ಯ ಮೊದಲಾದ ಅಸ್ಪೃಶ್ಯ ಪುರುಷರು, ಕಾಳವ್ವೆಯಂಥ ಅಸ್ಪೃಶ್ಯ ಮಹಿಳೆಯರು, ಸುಶಿಕ್ಷಿತರಾಗಿ - ಸುಸಂಸ್ಕೃತರಾಗಿ ಬೆಳೆದು ವಚನ ಸಾಹಿತ್ಯವನ್ನು ಬೆಳೆಸಿದರು. ದುರ್ದೈವದ ಸಂಗತಿಯೆಂದರೆ ತರುವಾಯದ ದಿನಗಳಲ್ಲಿ ಪ್ರಭುವರ್ಗ-ಪುರೋಹಿತವರ್ಗಗಳು ಮತ್ತೆ ಪ್ರಬಲವಾಗಿ, ಪ್ರಜಾವರ್ಗ-ಭಕ್ತವರ್ಗ-ಸ್ತ್ರೀವರ್ಗಗಳನ್ನು ಅಕ್ಷರ ಸಂಸ್ಕೃತಿಯಿಂದ ವಂಚಿತಗೊಳಿಸಿದವು. ಹೀಗಿದ್ದೂ ವಿದ್ಯಾರ್ಥಿಗಳಿಗಾಗಿ ಸಾಲಿಮಠಗಳನ್ನೂ, ಯುವಕರಿಗಾಗಿ ಸಂಜೆ ಮಠಗಳನ್ನು ಸ್ಥಾಪಿಸುತ್ತ ಬರುವ ಮೂಲಕ 'ಸಾರ್ವಜನಿಕ ಶಿಕ್ಷಣ' ವ್ಯವಸ್ಥೆಯನ್ನು ೧೯ನೆಯ ಶತಮಾನದವರೆಗೂ ಬದುಕಿಸುತ್ತ ಬಂದಿದ್ದ ಲಿಂಗಾಯತರು ಆಂಗ್ಲರಿಂದಾಗಿ ಅಸ್ತಿತ್ವಕ್ಕೆ ಬಂದ ಹೊಸ ಬಗೆಯ ಸಾರ್ವಜನಿಕ ಶಿಕ್ಷಣ ಪದ್ಧತಿಗೆ, ಸಹಜವಾಗಿಯೇ ಸ್ಪಂದಿಸಿದರು. ಹೀಗೆ ಸ್ಪಂದಿಸಿದ ಉತ್ತರ ಕರ್ನಾಟಕದ ಪ್ರಥಮ ಶಿಕ್ಷಣ ಸಂಸ್ಥೆಯಾಗಿ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ' ಕಾರ್ಯಪ್ರವೃತ್ತವಾಗಿದೆ.

೧೯೧೬ ನವ್ಹಂಬರ ೧೩ ರಂದು ಈ ಸಂಸ್ಥೆಯ ಸ್ಥಾಪನೆಯಾಯಿತು. ಆ ಹೊತ್ತಿಗೆ ಈ ಸಂಸ್ಥೆಯೂ ಒಳಗೊಂಡಂತೆ ಲಿಂಗಾಯತ ಸಮಾಜದಲ್ಲಿ, ಮೂರು ಶೈಕ್ಷಣಿಕ ಪ್ರಯತ್ನಗಳು ನಡೆದವು. ಅವುಗಳೆಂದರೆ ಮೊದಲನೆಯದಾಗಿ ಬೆಳಗಾವಿಯ ಲಿಂಗಾಯತ ಬೋರ್ಡಿಂಗ, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಬೆಳಗಾವಿಯ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಅಂದಿನ ಅಗತ್ಯತೆಗಳನ್ನು ಗಮನಿಸಿ ಲಿಂಗಾಯತರು ಈ ಸಂಸ್ಥೆಗಳನ್ನು ಸ್ಥಾಪಿಸಿದರು. ಅಂದರೆ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಇವುಗಳಲ್ಲಿ ಮೊದಲನೆಯದು ಅನ್ನದಾಸೋಹದ ಅಗತ್ಯವನ್ನು, ಎರಡನೆಯದು ಅರ್ಥದಾಸೋಹದ ಅಗತ್ಯವನ್ನು, ಮೂರನೆಯದು ನೇರವಾಗಿ ಶಿಕ್ಷಣ ದಾಸೋಹದ ಅಗತ್ಯವನ್ನು ಪೂರೈಸಿದವು. ಇವುಗಳಲ್ಲಿ ಮೊದಲನೆಯದು ಶಿಕ್ಷಣಕ್ಕಾಗಿ ಬೆಳಗಾವಿಗೆ ಬಂದು ಊಟದ ನೆರವು ಪಡೆಯುವ ವ್ಯವಸ್ಥೆಯಾಗಿದೆ. ಇದು ಕೇಂದ್ರೀಕೃತ ವ್ಯವಸ್ಥೆಯೊಂದು ವಿಕೇಂದ್ರಿಕೃತ ವ್ಯವಸ್ಥೆಯಾಗಿ ಮಾರ್ಪಟ್ಟುದನ್ನು ಸೂಚಿಸುತ್ತದೆ. ಕೆ.ಎಲ್.ಇ. ಸಂಸ್ಥೆಯು ಲಿಂಗಾಯತರನ್ನು, ಲಿಂಗಾಯತೇತರರನ್ನೂ ಒಳಗೊಳ್ಳುವ ಮೂಲಕ ವಿಕೇಂದ್ರೀಕೃತವೆನಿಸಿತು. ಇಂಜಿನಿಯರಿಂಗ್, ಮೆಡಿಕಲ್‌ಗಳಂಥ ಕಾಲೇಜುಗಳ ಸ್ಥಾಪನೆಯಿಂದಾಗಿ ದೇಶ ವಿದೇಶಗಳಲ್ಲಿಯೂ

ವಿಕೇಂದ್ರಿತಗೊಂಡಿತು. ಜಾತಿ, ದೇಶ, ಭಾಷೆ ಇತ್ಯಾದಿಗಳನ್ನು ಮೀರಿದ ವಿಕೇಂದ್ರಿತ ಸೇವೆಯೇ 'ದಾಸೋಹ' ಎಂಬುದನ್ನು ಕೆ.ಎಲ್.ಇ. ಸಂಸ್ಥೆ ಶಿಕ್ಷಣದ ಮೂಲಕ ಮನಗಾಣಿಸಿಕೊಟ್ಟಿತು. ಇದರಿಂದಾಗಿ ಈ ಸಂಸ್ಥೆ ಒಂದೇ ಜಾತಿಯ ಮರಗಳ ತೋಪು ಆಗದೆ ಎಲ್ಲ ಜಾತಿಯ ಮರಗಳ ಅರಣ್ಯವಾಗಿ ವಿದ್ಯಾರಣ್ಯವಾಗಿ ಬೆಳೆಯತೊಡಗಿರುವುದು ಅನುಕರಣೀಯವಾಗಿರುವಂತಹದ್ದು.

೧೯೬೬ ರಲ್ಲಿ ಮಹಾಜನ ಆಯೋಗದ ಎದುರು ಅಂದಿನ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿದ್ದ ಡಾ. ವ್ಹಿ.ವ್ಹಿ. ತೆಗ್ಗಿಮನಿಯವರು ಸಾಕ್ಷಿ ಹೇಳಿದ ಘಟನೆ ಕನ್ನಡ ಭಾಷೆಯ ಹಾಗೂ ಕನ್ನಡ ನಾಡಿನ ಏಳ್ಗೆಗೆ ಶ್ರಮಿಸಿದುದರ ಕೈಗನ್ನಡಿಯಾಗಿದೆ. ಶಿಕ್ಷಣಕ್ಕೆ ಧರ್ಮ, ಜಾತಿ, ಬಡವರಿಗಾಗಿ ಉಚಿತ ಚಿಕಿತ್ಸೆಯ ಸೌಕರ್ಯವನ್ನು ಒದಗಿಸಲಾಗಿದೆ. ಉತ್ತರ ಕರ್ನಾಟಕದ ಜನತೆ ೨೦೦೪ ರಲ್ಲಿ ಅತಿವೃಷ್ಟಿಯಿಂದ ಬಳಲುತ್ತಿರುವ ಸಂದರ್ಭದಲ್ಲಿ ಹಳ್ಳಿ ಹಳ್ಳಿಗೆ ಹೋಗಿ ಆ ಜನತೆಗೆ ಚಿಕಿತ್ಸೆ ನೀಡಿ ಮರುಜೀವ ನೀಡಿದ ಶ್ರೇಯಸ್ಸು ಈ ಆಸ್ಪತ್ರೆಯದ್ದು.

೧೯೯೨ ರಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆ ಬೆಳಗಾವಿಯಲ್ಲಿ ನಡೆಯಿತು. ಅಂದಿನ ರಾಜ್ಯಪಾಲರಾಗಿದ್ದ ಶ್ರೀ ಖುರ್ಷಿದ ಆಲಂ ಖಾನ, ಹಾಗೂಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ಬಂಗಾರಪ್ಪನವರು, ರಾಷ್ಟ್ರನಾಯಕ ಶ್ರೀ ಎಸ್. ನಿಜಲಿಂಗಪ್ಪ, ಕೇಂದ್ರ ಸಚಿವ ಶ್ರೀ ವಿ. ಶಂಕರಾನಂದ, ಅಲ್ಲದೆ ಅನೇಕ ಕೇಂದ್ರ ಹಾಗೂ ರಾಜ್ಯ ಸಚಿವರು, ವಿರಕ್ತ ಮಠಾಧೀಶರು, ಪಂಚ ಪೀಠಾಧಿಪತಿಗಳು ಪಾಲ್ಗೊಂಡಿದ್ದರು. ಈ ಅಧಿವೇಶನದ ಯಶಸ್ಸಿಗಾಗಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆ ಹಾಗೂ ಗೌರವ ಅಧ್ಯಕ್ಷರಾಗಿದ್ದ ಎಂ.ಕೆ. ಕವಟಗಿಮಠ ಹಾಗೂ ಎಲ್ಲ ಸಿಬ್ಬಂದಿವರ್ಗದವರು ಹಗಲಿರುಳು ಶ್ರಮಿಸಿ ಅಧಿವೇಶನ ಸಂಪೂರ್ಣ ಯಶಸ್ವಿಯಾಗಲು ಆ ಮೂಲಕ ಕೆ.ಎಲ್.ಇ. ಸಂಸ್ಥೆ ಪ್ರಮುಖ ಪಾತ್ರ ವಹಿಸಿತು.

'ಭಾಷೆಯೆನ್ನುವುದು ಒಂದು ದೇಶದ ಬೆಳೆಯೂ ಹೌದು, ಬೇಲಿಯೂ ಹೌದು' ಎಂದು ಬಲ್ಲಿದರು ಹೇಳುತ್ತಾರೆ. ಬೆಳೆಯ ರಕ್ಷಣೆಗಾಗಿ ಬೇಲಿ ಆವಶ್ಯ. ಕೆ.ಎಲ್.ಇ. ಸಂಸ್ಥೆ ನಿಪ್ಪಾಣಿ, ಚಿಕ್ಕೋಡಿ, ಅಥಣಿ ಮೊದಲಾದ ತಾಲ್ಲೂಕುಗಳಲ್ಲಿ ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದುದೆಂದರೆ ಕನ್ನಡ ಭಾಷೆಯ ಬೇಲಿಯನ್ನು ಭದ್ರಪಡಿಸಿದುದು ಸಾಲದುದಕ್ಕೆ ಇಂದು ಮರಾಠರ ಮಡಿಲಿಗೆ ಬಿದ್ದಿರುವ ಬಾರ್ಸಿ, ಸೊಲ್ಲಾಪುರ, ಅಕ್ಕಲಕೋಟೆಗಳಲ್ಲಿಯ ಕೆ.ಎಲ್.ಇ. ಸಂಸ್ಥೆಗಳು ಕನ್ನಡದ ರಾಯಭಾರಿಯಾಗಿ ಕೆಲಸ ಮಾಡುತ್ತಲಿವೆ. ಕೇವಲ ಶಿಕ್ಷಣದ ಮಿತಿಯಲ್ಲಿ ಅಷ್ಟೇ ಕನ್ನಡ ಕಾರ್ಯ ನಡೆಯುತ್ತಿರಲಿಲ್ಲ. ಹೊರಗೂ ಸಾರ್ವಜನಿಕವಾಗಿ ನಾಡಹಬ್ಬ,

ಬಸವಜಯಂತಿ, ಸಿರಸಂಗಿ ಲಿಂಗರಾಜರ ಜಯಂತಿ, ಉತ್ಸವಗಳನ್ನು ಆಚರಿಸುತ್ತ ಬೆಳಗಾವಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಡಿಸಿ, ಕನ್ನಡ ಪರ ಘೋಷಣೆಗಳನ್ನು ಹಾಕಿ, ಕನ್ನಡಿಗರಲ್ಲಿ ಧೈರ್ಯ ತುಂಬುವ ಕೆಲಸವನ್ನು ಈ ಸಂಸ್ಥೆ ಮಾಡಿದೆ. ಆಗಾಗ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಹಮ್ಮಿಕೊಂಡು, ಹಮ್ಮಿಕೊಳ್ಳಲು ಬೆನ್ನೆಲುಬಾಗಿ ನಿಂತಿದ್ದು ಗಡಿಭಾಗದ ಕನ್ನಡಿಗರ ಸೌಭಾಗ್ಯವೆನ್ನುವಂತಾಗಿದೆ. ಅಷ್ಟೇ ಅಲ್ಲದೆ ೨೦೦೩ ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ೨೦೧೧ ರಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಯಶಸ್ಸಿನ ರೂವಾರಿಯಾಗಿ ಕಾರ್ಯಗೈದಿದೆ. ಇದರಿಂದ ಬೆಳಗಾವಿಯಲ್ಲಿ ಸಮಗ್ರ ಕನ್ನಡ ರಕ್ಷಣೆಯ ಮುಖ್ಯ ಸಂಸ್ಥೆಯೆಂದರೆ ಕೆ.ಎಲ್.ಇ. ಎನ್ನುವ ಮಾತು ಜನಜನಿತವಾಗಿದೆ.

ಮಹಾರಾಷ್ಟ್ರ ಹಾಗೂ ಕರ್ನಾಟಕದ ನಡುವೆ ಇನ್ನೂವರೆಗೆ ಮುಗಿಯದ ಗಡಿನಾಡು ಪ್ರದೇಶದ ಪ್ರಶ್ನೆಗೆ ಹಿಂದೆಯೇ ನ್ಯಾಯಮೂರ್ತಿ ಮೆಹರ ಚಂದ ಮಹಾಜನ ಅವರು ಬಂದಾಗ ಬೆಳಗಾವಿ ಶುದ್ಧ ಕನ್ನಡ ನಾಡಿನ ಪ್ರದೇಶ, ಅಲ್ಲದೆ ಇನ್ನು ಕನ್ನಡ ನಾಡಿನ ಮುಖ್ಯ ಪ್ರದೇಶಗಳಾದ ಸೊಲ್ಲಾಪುರ, ಅಕ್ಕಲಕೋಟೆ, ಜತ್ತ ಇತ್ಯಾದಿ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕು ಎಂಬ ಮನವಿಯನ್ನು ಅರ್ಪಿಸಿ ಅವರಿಗೆ ಭಾಷೆ, ಪಂಥ ಅಥವಾ ಸಮಾಜಗಳ ನಿರ್ಬಂದನೆಗಳಿಲ್ಲ. ಕೇವಲ ಭಾಷಾ ತಳಹದಿಯ ಮೇಲೆ ದೇಶವನ್ನು ವಿಚ್ಛಿದ್ರಗೊಳಿಸುವುದು ರಾಷ್ಟ್ರದ ಹಿತಕ್ಕೆ ಧಕ್ಕೆಯುಂಟು ಮಾಡುತ್ತದೆಯೆಂಬ ವಿಚಾರವನ್ನು ನಾವು ಸಂಪೂರ್ಣವಾಗಿಯೂ, ದೃಢವಾಗಿಯೂ ಸಮರ್ಥಿಸುತ್ತೇವೆ. ರಾಜ್ಯಗಳ ಪುನರ್ವಿಂಗಡಣಾ ಆಯೋಗವು ಅಭಿಪ್ರಾಯ ಪಟ್ಟಂತೆ ಪುನರ್ ವಿಂಗಡಣೆಯು ತರ್ಕಸಮ್ಮತವಾದ ಮತ್ತು ರಾಷ್ಟ್ರೀಯವಾದದ ತಳಹದಿಯ ಮೇಲೆ ನಡೆಯಬೇಕು. ಕೇವಲ ಭಾಷೆಗೆ ಮಹತ್ವ ಕೊಟ್ಟಲ್ಲಿ ಭಾಷಾದುರಾಭಿಮಾನ ಮತ್ತು ಐಕ್ಯತಾ ವಿಚ್ಛಿದ್ರತೆಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ರಾಜ್ಯಗಳು ಪುನರ್ ವಿಂಗಡಣಾ ಆಯೋಗವು 'ಭಾಷೆಯ ಒಗ್ಗೂಡಿಸುವ ಇಲ್ಲವೆ ಬೇರ್ಪಡಿಸುವ ಶಕ್ತಿಯಾಗಿದೆ' ಎಂದು ಹೇಳಿದಾಗ ರಾಜ್ಯಗಳ ವಿಂಗಡಣಾ ಸಮಸ್ಯೆಯ ಕ್ಲಿಷ್ಟಾಂಶವನ್ನು ಅದು ಅರಿತಿರುವುದು ಭಾಸವಾಗುತ್ತದೆ. ಶ್ರೀ ಕೆ.ಎಂ. ಮುನಷಿ, ಶ್ರೀ ವ್ಹಿ.ವ್ಹಿ. ಗಿರಿ ವರಿಷ್ಟ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಜೆ.ಸಿ. ಶಹಾ ಮುಂತಾದ ದೇಶದ ಪ್ರಜ್ಞಾವಂತರಾದ ಮಹನೀಯರು ಭಾಷಾ ತಳಹದಿಯ ಮೇಲಿನ ದೇಶದ ವಿಭಜನೆ ಮತ್ತು ರಾಷ್ಟ್ರದ ಮೇಲೆ ಅದರಿಂದಾದ ವಿನಾಶಕಾರಿ ಪರಿಣಾಮಗಳನ್ನು ಮನಗಂಡು ವ್ಯಥೆಪಟ್ಟಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಭಾಷೆಯ ತಳಹದಿಯ ಮೇಲೆ ನಿಂತ ರಾಜ್ಯಗಳು ಬೇಕಾಗಿಲ್ಲ. ಎಲ್ಲ ಸಮಸ್ಯೆಗಳನ್ನು ರಾಜಕೀಯ ಸಮಸ್ಯೆಗಳನ್ನು ಕೂಡ ಬಿಡಿಸುವ ರಾಷ್ಟ್ರೀಯವಾದ ನಮಗೆ ಬೇಕಾಗಿದೆ. ರಾಷ್ಟ್ರಕ್ಕೆ ಅಗತ್ಯವಾದ ವಿಭಿನ್ನತೆಯಲ್ಲಿ ಏಕತೆಯನ್ನು ಅರಿತು, ಶಿಕ್ಷಣದ ಎಲ್ಲ

ಹಂತಗಳಲ್ಲಿ ಅದನ್ನು ಒಡಮೂಡಿಸುವ ಕಲೆಯನ್ನು ನಮ್ಮ ತರುಣರಿಗೆ ಕಲಿಸಬೇಕು. ವ್ಯವಹಾರಿಕ ಪರಿಗಣನೆಯ ತಳಹದಿಯ ಮೇಲೆ ಭಾಷಾ ಸಮಸ್ಯೆಯನ್ನು ತರ್ಕಸಮ್ಮತವಾದ ರೀತಿಯಲ್ಲಿ ಬಗೆಹರಿಸಬೇಕೆಂದು ಕೆ.ಎಲ್.ಇ. ಸಂಸ್ಥೆಯ ಪರವಾಗಿ ಕಾರ್ಯಾಧ್ಯಕ್ಷರಾಗಿದ್ದ, ಡಾ. ವ್ಹಿ.ವ್ಹಿ ತೆಗ್ಗಿಮನಿ ಹಾಗೂ ಕಾರ್ಯದರ್ಶಿ ಪ್ರಾಚಾರ್ಯರಾದ ಬಿ. ರುದ್ರಪ್ಪನವರು ಹಾಗೂ ಇತರ ಪದಾಧಿಕಾರಿಗಳು ಮಹಾಜನ ಆಯೋಗಕ್ಕೆ ನಿವೇದನೆ ಸಲ್ಲಿಸಿದರು. ಅಂದಿನಿಂದ ಇಂದಿನವರೆಗೂ ಕೆ.ಎಲ್.ಇ. ಸಂಸ್ಥೆ ಶಿಕ್ಷಣಕ್ಕೆ ಅಷ್ಟೇ ಅಲ್ಲದೆ ಭಾಷೆಯ ಬೆಳವಣಿಗೆಗೆ, ಕರ್ನಾಟಕ ಗಡಿ ಸಮಸ್ಯೆ ಪರಿಹರಿಸುವ ಕಾರ್ಯದ ಜೊತೆಗೆ, ರಾಜಕೀಯವಾಗಿ, ಸಾಮಾಜಿಕವಾಗಿ ಕಾರ್ಯಗಳನ್ನು ಮಾಡುವುದರಲ್ಲಿ ಮುಂಚೂಣಿಯಲ್ಲಿದೆ.

ಉತ್ತರ ಕರ್ನಾಟಕದ ಸಂಜೀವಿನಿಯಾಗಿ ಕಾರ್ಯಗೈಯ್ಯುತ್ತಿರುವ ಡಾ. ಪ್ರಭಾಕರ ಕೋರೆಯವರ ಆಸ್ಪತ್ರೆ ಬಡವರ ಪಾಲಿಗೆ ಅಮೃತ ಬಿಂದುವಾಗಿದೆ. ಹಲವಾರು ರೋಗಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸುಸಜ್ಜಿತವಾದ ಕಟ್ಟಡದ ಜೊತೆಗೆ ಒಳ್ಳೆಯ ಸಿಬ್ಬಂದಿಯನ್ನು ಹೊಂದಿರುವುದು ಕೋರೆಯವರ ಕಾರ್ಯಕ್ಷಮತೆಯನ್ನು ತೋರಿಸುತ್ತದೆ.

ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ನೋಡಿದಾಗ ಹಲವಾರು ಮಹತ್ವಪೂರ್ಣ ಸಮಾರಂಭಗಳಿಗೆ ವೇದಿಕೆಯಾಗಿದೆ. ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನ, ಕಾಂಗ್ರೆಸ್ ಅಧಿವೇಶನ, ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು, ೧೯೨೪ ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ, ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿ ಎರಡು ಸಲ ವಿಧಾನ ಮಂಡಲದ ಅಧಿವೇಶನ ಹಾಗೂ ೨೦೧೧ ಮಾರ್ಚ್ ೧೧, ೧೨, ೧೩ ರಂದು ನಡೆದ ಮೂರು ದಿನಗಳ ವಿಶ್ವಕನ್ನಡ ಸಮ್ಮೇಳನಕ್ಕೆ ಮುಖ್ಯ ವೇದಿಕೆಯಾಗಿದ್ದು ಕೆ.ಎಲ್.ಇ. ಸಂಸ್ಥೆ ಹಾಗೂ ಸಮಾರಂಭದ ಕಾರ್ಯಾಧ್ಯಕ್ಷರಾಗಿದ್ದ ಡಾ. ಪ್ರಭಾಕರ ಕೋರೆಯವರ ಮಿತಿಮೀರಿದ ಶ್ರದ್ಧೆ ಹಾಗೂ ಪ್ರಯತ್ನದ ಫಲವಾಗಿ ಯಶಸ್ವಿಯಾದದ್ದು, ಗಮನಾರ್ಹವೇ ಸರಿ.

೧೯೧೬ ರಿಂದ ೨೦೧೧ ರವರೆಗೂ ಕೆ.ಎಲ್.ಇ. ಸಂಸ್ಥೆಯು ಶಿಕ್ಷಣದ ಜೊತೆಗೆ, ಸಾಮಾಜಿಕವಾಗಿ, ರಾಜಕೀಯವಾಗಿ, ಕನ್ನಡ ಭಾಷೆಯ ಉಳಿವಿಗಾಗಿ ಹಾಗೂ ಕರ್ನಾಟಕದ ಗಡಿಭಾಗದ ರಕ್ಷಣೆಗಾಗಿ ಮತ್ತು ಹಲವಾರು ಪ್ರಮುಖ ಸಭೆ, ಸಮಾರಂಭಗಳ ಹೃದಯಭಾಗವಾಗಿದೆ. ಒಟ್ಟಾರೆ ಹತ್ತು ಹಲವಾರು ವೈಶಿಷ್ಟ್ಯ ಹಾಗೂ ಅನುಕರಣೀಯ ಎಂಬಂತಹ ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ವಲಯಗಳಲ್ಲಿ ತನ್ನದೇ ಆದಂತಹ ಘನತೆಯೊಂದಿಗೆ ಮಹತ್ವವನ್ನು ಕಾಪಾಡಿಕೊಂಡು ಕಾರ್ಯಮಾಡುತ್ತ ಪ್ರಸಿದ್ಧಿಯನ್ನು ಪಡೆಯುತ್ತಾ ಸಾಗುತ್ತಿರುವುದುನ್ನು ಕಾಣಬಹುದಾಗಿದೆ.